ಕನ್ನಡ ಚಲನಚಿತ್ರಗಳಿಗೆ ಸಬ್ಸಿಡಿ

177 (522) ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ) ಮಾನ್ಯ ಉನ್ನತ ಶಿಕ್ಷಣ ಹಾಗೂ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕನ್ನಡ ಚಲನಚಿತ್ರಗಳಿಗೆ 2002–03 2003–04ನೇ ಸಾಲಿಗಾಗಿ ಬಿಡುಗಡೆಯಾದ ಸಬ್ಸಿಡಿಯ ಅನುದಾವೆಷ್ಟು ವಿವರ ಒದಗಿಸುವುದು.

ಆ) ಸಬ್ಸಿಡಿ ಹಣವನ್ನು ಯಾವ ಯಾವ ಆಧಾರವನ್ನು ಅನುಸರಿಸಿ ಸರ್ಕಾರವು ನೀಡಲಾಗುತ್ತದೆ

ಇ) ಇಂದಿನ ಚಲನಚಿತ್ರಗಳು ಅಶ್ಲೀಲ ಸಂಭಾಷಣೆಯಿಂದ ಕೂಡಿದ್ದು ಯುವ ಪೀಳಿಗೆಯು ಕೆಟ್ಟ ದಾರಿಯ ಹಾದಿ ತುಳಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಇಂತಹ ಚಿತ್ರಗಳ ವಿರುದ್ಧ ಸರ್ಕಾರವು ಕೈಗೊಳ್ಳುವ ಕ್ರಮಗಳೇನು?

ಡಾ॥ ಜಿ ಪರಮೇಶ್ವರ್ (ಉನ್ನತ ಶಿಕ್ಷಣ ಹಾಗೂ ವಾರ್ತಾ ಸಚಿವರು)

ಅ) 2002–03ನೇ ಸಾಲಿಗೆ ರೂ 245 00 ಲಕ್ಷ

2003–04ನೇ ಸಾಲಿಗೆ ರೂ 245 00 ಲಕ್ಷ

2002–03 ಹಾಗೂ 2003–04ನೇ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಲಾದ ಅನುದಾನವನ್ನು ಅನುಕ್ರಮವಾಗಿ 1998–99, 1999–00 ಹಾಗೂ 2000–01ನೇ ಸಾಲಿನಲ್ಲಿ ಆಯ್ಕೆಯಾದ ಚಿತ್ರಗಳಿಗೆ ಸಬ್ಸಿಡಿಯನ್ನು ಬಿಡುಗಡೆ ಮಾಡಲಾಗಿದೆ ವಿವರಗಳನ್ನು ಲಗತ್ತಿಸಿದೆ

ಆ) ದಿನಾಂಕ 01 04 1996 ರಿಂದ ಜಾರಿಯಲ್ಲಿರುವ ಸರ್ಕಾರದ ಚಲನಚಿತ್ರ ನೀತಿಯನ್ವಯ ಸರ್ಕಾರದಿಂದ ಕಾಲಕಾಲಕ್ಕೆ ರಚಿಸಲಾಗುವ ಗುಣಾತ್ಮಕ ಆಯ್ಕೆ ಸಲಹಾ ಸಮಿತಿಯು ಸರ್ಕಾರದ ಆದೇಶ ಸಂಖ್ಯೆ ಬಿಐವೈ 13 ಪಿಐಎಫ್ 99, ದಿನಾಂಕ 27 02 1999ರಲ್ಲಿ ನಿಗದಿಪಡಿಸಲಾಗಿರುವ ಮಾರ್ಗಸೂಚಿಯಂತೆ ಒಂದು ಆರ್ಥಿಕ ವರ್ಷದಲ್ಲಿ ಗರಿಷ್ಠ 20 ಅರ್ಹ ಚಿತ್ರಗಳನ್ನು ಸಹಾಯಧನಕ್ಕೆ ಆಯ್ಕೆ ಮಾಡುತ್ತದೆ

ಇ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲವಾದ್ದರಿಂದ ಕ್ರಮ ಕೈಗೊಳ್ಳವ ಪ್ರಶ್ನೆ ಉದ್ಭವಿಸುವುದಿಲ್ಲ

ಅನುಬಂಧ

2002–03ನೇ ಸಾಲಿನ ಅನುದಾನದಲ್ಲಿ (1) 1998–99ನೇ ಸಾಲಿನ ಈ ಕೆಳಕಂಡ 20 ಚಿತ್ರಗಳಿಗೆ ತಲಾ ರೂ 5 00 ಲಕ್ಷಗಳ ಅಂತಿಮ ಕಂತಿನ ಸಹಾಯಧನ ಪಾವತಿಸಲಾಗಿದೆ (ಒಟ್ಟು ಪಾವತಿಸಿದ ಮೊತ್ತ ರೂ 1 00 ಕೋಟಿ)

1 ನೋಡು ಬಾ ನಮ್ಮೂರ 2 ವಿಮೋಚನೆ 3 ಜೋಡಿ ಹಕ್ಕಿ, 4 ಅಂತರ್ಗಾಮಿ 5 ಭೂಮಿಗೀತೆ 6 ಮೇಘ ಬಂತು ಮೇಘ 7 ಅಗ್ನಿಸಾಕ್ಷಿ 8 ಚಿಟ್ಟೆ 9 ನಿಶ್ಯಬ್ದ 10 ವಜ್ರ 11 ವೀರಪ್ಪನಾಯಕ 12 ಹೃದಯವಂತರು 13 ಟುವ್ವಿ, ಟುವ್ವಿ, ಟುವ್ವಿ 14 ಪ್ರತಿಭಟನೆ 15 ನೀ ಮುಡಿದಾ ಮಲ್ಲಿಗೆ 16 ದೋಣಿಸಾಗಲಿ 17 ಅಂಡಮಾನ್ 18 ಭೂಮಿ ತಾಯಿಯ ಚೊಚ್ಚಲ ಮಗ 19 ಆಡಿ ಬಾ ಅರಗಿಣಿಯೆ 20 ಶ್ರೀ ಸಿದ್ದಾರೂಢ ಮಹಾತ್ಮೆ

(2) 1999–2000ನೇ ಸಾಲಿನ ಈ ಕೆಳಕಂಡ 20 ಚಿತ್ರಗಳಿಗೆ ತಲಾ ರೂ 5 00 ಲಕ್ಷಗಳ ಭಾಗಶ ಸಹಾಯಧನವನ್ನು ಪಾವತಿಸಲಾಗಿದೆ (ಒಟ್ಟು ಪಾವತಿಸಿದ ಮೊತ್ತ ರೂ 1 00 ಕೋಟಿ)

1 ದೇವೀರಿ 2 ಕಾನೂರು ಹೆಗ್ಗಡತಿ 3 ಚಂದ್ರಮುಖಿ ಪ್ರಾಣಸಖಿ 4 ಹೂಮಳೆ 5 ಶಬ್ದವೇದಿ 6 ಹೃದಯ ಹೃದಯ 7 ನಂಬರ್ – 1 8 ಚೈತ್ರದ ಚಿಗುರು 9 ಆರ್ಯಭಟ 10 ಪ್ರೇಮ ಪ್ರೇಮ ಪ್ರೇಮ 11 ವರ್ಷ ಋತು 12 ಕನಸಲು ನೀನೆ ಮನಸಲೂ ನೀನೆ 13 ಬಣ್ಣದ ಹೆಜ್ಜೆ 14 ಜನುಮದಾತ 15 ಅರುಣೋದಯ 16 ನನ್ನಾಸೆಯ ಹೂವೆ 17 ಜೀವನರಾಗ 18 ಗಾಜಿನ ಮನೆ 19 ಮನಸ್ಸು 20 ಒಂತೆ ಅಡ್ಜೆಸ್ಟ್ ಮಲ್ಪೆ

ಹಾಗೂ ಉಳಿದ ಅನುದಾನದಲ್ಲಿ ಇಲಾಖಾ ಚಿತ್ರಮಂದಿರಕ್ಕೆ ನೂತನ ಪ್ರೋಜೆಕ್ಟರುಗಳ ಖರೀದಿಗಾಗಿ ರೂ 14 ಲಕ್ಷ ನೂತನ 4 ಚಿತ್ರಮಂದಿರಗಳಿಗೆ ತಲಾ ರೂ 5 00 ಲಕ್ಷಗಳ ಸಹಾಯಧನ ಗುಣಾತ್ಮಕ ಸಮಿತಿಯ ಅತಿಥಿ ವೆಚ್ಚ ಹಾಗೂ ದಿನಭತ್ಯೆ ಪಾವತಿ – ಚಿತ್ರಮಂದಿರದ ನಿರ್ವಹಣೆಗಾಗಿ ವೆಚ್ಚ ಮಾಡಲಾಗಿದೆ

ವಿವರಗಳು 2003–04ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನದಲ್ಲಿ (1) 1999–2000ನೇ ಸಾಲಿನ ಈ ಕೆಳಕಂಡ 20 ಚಿತ್ರಗಳಿಗ ತಲಾ ರೂ 5 00 ಲಕ್ಷಗಳ ಅಂತಿಮ ಕಂತಿನ ಸಹಾಯಧನ ಪಾವತಿಸಲಾಗಿದೆ (ಒಟ್ಟು ಪಾವತಿಸಿದ ಮೊತ್ತ ರೂ 1 00 ಕೋಟಿ)

1 ದೇವೀರಿ 2 ಕಾನೂರು ಹೆಗ್ಗಡತಿ 3 ಚಂದ್ರಮುಖಿ ಪ್ರಾಣಸಖಿ 5 ಹೂಮಳೆ 5 ಶಬ್ದವೇದಿ 6 ಹೃದಯ ಹೃದಯ 7 ನಂಬರ್ – 1 8 ಚೈತ್ರದ ಚಿಗುರು 9 ಆರ್ಯಭಟ 10 ಪ್ರೇಮ ಪ್ರೇಮ ಪ್ರೇಮ 11 ವರ್ಷ ಋತು 12 ಕನಸಲೂ ನೀನೆ ಮನಸಲೂ ನೀನೆ 13 ಬಣ್ಣದ ಹೆಜ್ಜೆ 14 ಜನುಮದಾತ 15 ಅರುಣೋದಯ 16 ನನ್ನಾಸೆಯ ಹೂವೆ 17 ಜೀವನರಾಗ 18 ಗಾಜಿನ ಮನೆ 19 ಮನಸ್ಸು 20 ಒಂತೆ ಅಡ್ಜೆಸ್ಟ್ ಮಲ್ಪೆ ಹಾಗೂ

(2) 2001–01ನೇ ಸಾಲಿನ ಈ ಕೆಳಕಂಡ 20 ಚಿತ್ರಗಳಿಗೆ ತಲಾ ರೂ 5 00 ಲಕ್ಷಗಳ ಭಾಗಶ ಸಹಾಯಧನ ಪಾವತಿಸಲಾಗಿದೆ (ಒಟ್ಟು ಪಾವತಿಸಿದ ಮೊತ್ತ ರೂ 1 00 ಕೋಟಿ)

1 ಮುಸ್ಸಂಜೆ 2 ಎ ಕೆ 47 3 ಚಾಮುಂಡಿ 4 ಹಬ್ಬ 5 ವಂದೇ ಮಾತರಂ 6 ಚಂದನ ಚಿಗುರು 7 ಸುಲ್ತಾನ್ 8 ಗಟ್ಟಿಮೇಳ 9 ಹಗಲುವೇಷ 10 ಉತ್ತರ ದ್ರುವದಿಂ ದಕ್ಷಿಣ ಧ್ರುವಕೂ 11 ಭಾರತನಾರಿ 12 ಹ್ಯಾಟ್ಸ್ ಆಫ್ ಇಂಡಿಯಾ 13 ಭೂಮಿ 14 ಶ್ರೀರಸ್ತು ಶುಭಮಸ್ತು 15 ಮಹಾಲಕ್ಷ್ಮೀ 16 ಅಂಜಲಿ ಗೀತಾಂಜಲಿ 17 ಕಡ್ಲಿಮಟ್ಟಿ ಸ್ಟೇಷನ್ ಮಾಸ್ಟರ್ 18 ದುರ್ಗದ ಹುಲಿ 19 ಸ್ಪರ್ಶ 20 ಅಂತಃಪುರ ಹಾಗೂ

ಉಳಿದ ಅನುದಾನದಲ್ಲಿ ರಾಷ್ಟ್ರೀಯ ಚಿತ್ರೋತ್ಸವದಲ್ಲಿ ಆಯ್ಕೆಯಾಗಿ ಸ್ವರ್ಣಫಲಕ ಪಡೆದ ದ್ವೀಪ ಚಿತ್ರಕ್ಕೆ ರೂ 15 60 ಲಕ್ಷ, 1997–98ನೇ ಸಾಲಿನ ಅಮೇರಿಕಾ ಅಮೇರಿಕಾ ಚಿತ್ರಕ್ಕೆ ರೂ 10 00 ಲಕ್ಷ 1994–95ನೇ ಸಾಲಿನ ಭುವನಜ್ಯೋತಿ ಚಿತ್ರಕ್ಕೆ ರೂ 3 00 ಲಕ್ಷ ಮತ್ತು ನೂತನ ಪ್ರೊಜೆಕ್ಟರ್‌ಗಳಿಗೆ ಬಲ್ಬುಗಳನ್ನು ಖರೀದಿಸಲು ರೂ 1 00 ಲಕ್ಷ ಹಾಗೂ ಗುಣಾತ್ಮಕ ಸಮಿತಿಯ ಅತಿಥಿ ವೆಚ್ಚ ಹಾಗೂ ದಿನಭತ್ಯೆ ಪಾವತಿಗಾಗಿ ವೆಚ್ಚ ಮಾಡಲಾಗಿದೆ

ಬಾಗೇಪಲ್ಲಿ ಕ್ಷೇತ್ರದಲ್ಲಿರುವ ಪದವಿಪೂರ್ವ ಕಾಲೇಜು

179 (524) ಶ್ರೀ ಎನ್ ಸಂಪಂಗಿ (ಬಾಗೇಪಲ್ಲಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು